ಭಾವಿಸಲಾರದು. ಆತ್ಮನು ಸರ್ವವ್ಯಾಪಿ, ನಿರುಪಾಧಿಕ. ಆದ್ದರಿಂದ ಆತ್ಮನಲ್ಲಿ 'ಅಹಂ' ಇರಲಾರದು. ಆದರೆ, ಇವೆರಡೂ ಸೇರಿದಾಗ 'ಅಹಂ' ಎನ್ನುವುದು ಹುಟ್ಟಿಕೊಳ್ಳುತ್ತದೆ. ಆದ್ದರಿಂದಲೇ 'ಅಹಂ' ಅನ್ನು 'ಚಿತ್– ಜಡ ಗ್ರಂಥಿ' ಎಂದು ಕರೆಯುವುದು.

ಒಂದು ಲೇಖನಿಯಲ್ಲಿ ಪ್ರಜ್ಞೆ ಉಂಟಾದರೆ 'ನಾನೇ ಬರೆಯುತ್ತೇನೆ' ಎಂದು ಅದು ಭಾವಿಸಬಹುದು. ಹೀಗೆ 'ಅಹಂ ಪ್ರಜ್ಞೆ'ಯೇ ಕರ್ತೃತ್ವಭಾವದ ಮೂಲ. ಯಾವುದೇ ಕ್ರಿಯೆಯನ್ನು ನಾವು ವಿಶ್ಲೇಷಿಸುತ್ತ ಹೋದರೆ ಏನೆಂದು ಗೊತ್ತಾಗುತ್ತದೆ? ಹಲವಾರು ಕ್ರಿಯೆಗಳು ಸೇರಿ ಒಂದು ಘಟನೆಯಾಗುತ್ತದೆ; ಅಂತಹ ಘಟನೆಗಳು ಹಲವಾರು ಅಂಶಗಳು ಕೂಡಿಕೊಂಡೇ ಆಗುತ್ತವೆ ಹಾಗೂ ಅಲ್ಲಿ 'ನಾನು' ಎಂಬ ಅಂಶದ ಪಾತ್ರವೇ ಇಲ್ಲ ಎಂಬುದು ತಿಳಿದುಬರುತ್ತದೆ. ಇದು ಹೇಗೆಂದರೆ, ಇರುವೆಗಳ ಹುತ್ತದಲ್ಲಿ ಹಾವು ಸೇರಿಕೊಂಡು ಅದು ತನ್ನದೇ ಎಂದು ಭಾವಿಸುವಂತೆ. ಒಂದು ಉಪನ್ಯಾಸ ಕ್ರಿಯೆ ನಡೆಯಬೇಕಾದರೆ ಶ್ರೋತೃಗಳು, ಬೆಳಕು, ಧ್ವನಿವರ್ಧಕ, ಮಾತನಾಡುವ ಧ್ವನಿಪೆಟ್ಟಿಗೆ, ಆಲೋಚಿಸುವ ಮನಸ್ಸು – ಇವೇ ಮುಂತಾದವು ಇರಬೇಕಾಗುತ್ತವೆ. ಇಲ್ಲಿ 'ನಾನು' ಎನ್ನುವುದರ ಪಾತ್ರ ಎಲ್ಲಿದೆ? ಇಲ್ಲದ 'ನಾನು' ಎಲ್ಲವನ್ನೂ ಮಾಡುತ್ತದೆ! ಎಷ್ಟು ವಿಚಿತ್ರ ! ಇದನ್ನೇ 'ಮಾಯೆ' ಎನ್ನುವುದು.

ಅಹಂಕಾರಕ್ಕೆ ಸಂಬಂಧಪಟ್ಟಂತೆ ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಾರೆ. ಒಬ್ಬ ಪ್ರಸಿದ್ಧ ಗುರು ಇದ್ದ. ಅವನಿಗೆ ಅನೇಕ ಶಿಷ್ಯರಿದ್ದರು. ಅವರಲ್ಲಿ ಒಬ್ಬ ಶಿಷ್ಯ ತುಂಬ ನಿಷ್ಠಾವಂತ, ಅತ್ಯಂತ ಭಕ್ತಿಭಾವದಿಂದ ಗುರುಸೇವೆ ಮಾಡುತ್ತಿದ್ದ. ಒಮ್ಮೆ ಆ ಶಿಷ್ಯನು ಸಮಿತ್ತನ್ನು ತರಲು ಹೋಗಿದ್ದನು. ನದಿ ದಾಟಿ ಹೋಗಬೇಕಿತ್ತು. ಅಂದು ತುಂಬ ಮಳೆ. ನದಿಯ ನೀರು ಮೇಲೇರಿ ನದಿ ದಾಟುವುದು ಅಸಾಧ್ಯವಾಗಿತ್ತು. ಆದರೂ ಆ ಶಿಷ್ಯನು ಸಮಯಕ್ಕೆ ಸರಿಯಾಗಿ ಸಮಿತ್ತನ್ನು ತೆಗೆದುಕೊಂಡು ಬಂದನು. ಗುರುವು ಆಶ್ಚರ್ಯದಿಂದ, "ನದಿ ಪ್ರವಾಹವಿರುವಾಗ ಹೇಗೆ ದಾಟಿಕೊಂಡು ಬಂದೆ?" ಎಂದು ಕೇಳಿದನು. ಶಿಷ್ಯನು ವಿನಯದಿಂದ, "ಭಕ್ತಿಯಿಂದ ತಮ್ಮ ಹೆಸರನ್ನು ಉಚ್ಚರಿಸುತ್ತಾ ನೀರಿನ ಮೇಲೆ ನಡೆದುಕೊಂಡು ಬಂದೆ. ಎಲ್ಲ ತಮ್ಮ ಅನುಗ್ರಹ" ಎಂದು ಗುರುವಿನ ಪಾದಕ್ಕೆ ವಂದಿಸಿದನು. ತನ್ನ ಹೆಸರಿಗೇ ಇಷ್ಟೊಂದು ಶಕ್ತಿ ಇರುವಾಗ ತನ್ನ ಮಹಿಮೆ ಎಂತಹುದಿರಬೇಕು ಎಂದು ಭಾವಿಸುತ್ತ ಗುರುವು ಹಿರಿಹಿರಿ ಹಿಗ್ಗಿದನು. ಆದರೂ ಆ ಶಕ್ತಿಯನ್ನು ಅವನಿಗೆ ಪ್ರತ್ಯಕ್ಷ ನೋಡಬೇಕೆನಿಸಿತು. ಗುರುವು ಶಿಷ್ಯನನ್ನು ಕರೆದುಕೊಂಡು ನದಿಯ ಹತ್ತಿರ ಹೋದನು. "ಹೇಗೆ ನದಿ ದಾಟಿದೆ, ಈಗ ತೋರಿಸು" ಎಂದು ಶಿಷ್ಯನಿಗೆ ಕೇಳಿದನು. ಶಿಷ್ಯನು ಕೈ ಮುಗಿದುಕೊಂಡು ಗುರುನಾಮವನ್ನು ಉಚ್ಚರಿಸುತ್ತ ನದಿಯ ಮೇಲೆ ನಡೆಯತೊಡಗಿದನು. ಸ್ವಲ್ಪ ಮುಂದೆ ಹೋಗಿ ಗುರುಗಳು ಇನ್ನೂ ದಡದಲ್ಲೇ ಇರುವುದನ್ನು ಕಂಡು, " ನೀವೂ ಬನ್ನಿ" ಎಂದು ಕರೆದನು. ಆದರೆ ಗುರುವು 'ನಾನು' ಎಂದು ಉಚ್ಚರಿಸುತ್ತ, ನೀರಿಗೆ ಇಳಿಯುತ್ತಿದ್ದಂತೆಯೇ ಪ್ರವಾಹದಲ್ಲಿ ಮುಳುಗಿಹೋದನು. ಈ ಬಗೆಯ ಅಹಂಕಾರವೇ ನಮ್ಮನ್ನು ಸಂಸಾರದಲ್ಲಿ ಮುಳುಗಿಸುವುದು.

'ನಾನು' ಎನ್ನುವುದು ಒಂದು ಪ್ರತಿಬಂಧಕ ಶಕ್ತಿ. ಭಗವದ್ ಶಕ್ತಿ ನಮ್ಮಲ್ಲಿ ಕೆಲಸ ಮಾಡುವುದನ್ನು ಅದು ತಡೆಯುತ್ತದೆ. ಒಂದು ಕೊಳಲಿನ ಒಳಭಾಗ ಟೊಳ್ಳಾಗಿರುವುದರಿಂದಲೇ ಅದರ ಮೂಲಕ ಮಧುರಗಾನ ಹೊರಹೊಮ್ಮುತ್ತದೆ. ಅದರೊಳಗೆ ಕಲ್ಲು, ಕಾಗದ ಏನಾದರೂ ಸೇರಿಕೊಂಡರೆ ಅಪಸ್ವರ ಉಂಟಾಗುತ್ತದೆ. ಹಾಗೆಯೇ ನಮ್ಮೊಳಗೆ ಅಹಂಕಾರ ಸೇರಿಕೊಂಡಾಗ ನಮ್ಮ ಜೀವನ ಅಸ್ತವ್ಯಸ್ತವಾಗುತ್ತದೆ, ನಮ್ಮ ಜೀವನ ಅಸ್ವಾಭಾವಿಕವಾಗುತ್ತದೆ, ಒಂದು ರೀತಿಯ ಕೃತಕತೆ ಉಂಟಾಗುತ್ತದೆ. ಚಿಕ್ಕ ಮಕ್ಕಳು ಅತ್ಯಂತ ಸ್ವಾಭಾವಿಕವಾಗಿ ವರ್ತಿಸುತ್ತಾರೆ. ಇದಕ್ಕೆ ಕಾರಣ ಅವರಲ್ಲಿ ಅಹಂಕಾರ ಇನ್ನೂ ಅರಳದೇ ಇರುವುದು. ವಯಸ್ಸಾದವರಲ್ಲಿಯೂ ಅಹಂಕಾರ ಕಡಿಮೆಯಾಗಿರುವುದರಿಂದ ಅವರೂ ಕೆಲವೊಮ್ಮೆ ಮಕ್ಕಳಂತೆ ವರ್ತಿಸುತ್ತಾರೆ. ಆದರೆ ವೃದ್ಧರು ಮತ್ತು ಮಕ್ಕಳು – ಇಬ್ಬರಲ್ಲೂ ಅಹಂಕಾರ ಸುಪ್ತವಾಗಿರುತ್ತದೆ. ಆದರೆ ಸ್ಥಿತಪ್ರಜ್ಞನಲ್ಲಿ ಅಹಂಕಾರದ ಲವಲೇಶವೂ ಇರುವುದಿಲ್ಲ. ಆದ್ದರಿಂದ ಅವನ ನಡೆನುಡಿಗಳು ಅತ್ಯಂತ ಸ್ವಾಭಾವಿಕವಾಗಿರುತ್ತವೆ.

ಇಂತಹ ಸ್ಥಿತಪ್ರಜ್ಞಾವಸ್ಥೆಯನ್ನೇ 'ಬ್ರಾಹ್ಮೀಸ್ಥಿತಿ' ಎಂದು ಶ್ರೀಕೃಷ್ಣ ಕರೆಯುತ್ತಾನೆ (೨:೭೨). ಇದು ಪರಬ್ರಹ್ಮದೊಡನೆ ಒಂದಾಗಿರುವ ಸ್ಥಿತಿ. "ಶುದ್ಧ ಮನಸ್ಸು ಮತ್ತು ಶುದ್ಧ ಆತ್ಮ ಒಂದೇ" ಎಂಬ ಶ್ರೀರಾಮಕೃಷ್ಣರ ಮಾತನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಮನಸ್ಸು ಪರಮಪವಿತ್ರವಾಗಿರುವುದರಿಂದ ಅದು ಆತ್ಮಭಾವದಿಂದ ಸಂಪೂರ್ಣ ತುಂಬಿಕೊಂಡಿರುತ್ತದೆ. ಸ್ಫಟಿಕದ ಹತ್ತಿರ ಒಂದು ಹೂವನ್ನು ಇಟ್ಟರೆ ಅದು ಹೂವಿನ ಬಣ್ಣದಿಂದ ಸಂಪೂರ್ಣ ಆವೃತಗೊಂಡು, ತನ್ನ ಅಸ್ತಿತ್ವವನ್ನು ಕಳೆದುಕೊಂಡಂತೆ ಇರುತ್ತದೆ. ಈ ರೀತಿ ಸ್ಥಿತಪ್ರಜ್ಞನೂ ಬ್ರಹ್ಮಭಾವದಿಂದ ಆವೃತನಾಗಿರುತ್ತಾನೆ. ಕೊನೆಯಲ್ಲಿ ಆತನು ಯಾವ ಮೋಹಕ್ಕೂ ಒಳಗಾಗದೆ, ಬ್ರಹ್ಮನಿರ್ವಾಣವನ್ನು ಪಡೆಯುತ್ತಾನೆ (೨: ೭೨). **ನಿರ್ಗತಂ ವಾನಂ ಗಮನಂ ಯಸ್ಮಿನ್ ಪ್ರಾಪ್ಯೇ ಬ್ರಹ್ಮಣಿ ತತ್ ನಿರ್ವಾಣಂ ॥** – "ಯಾವ ಬ್ರಹ್ಮನನ್ನು ಪಡೆಯುವುದರ ಮೂಲಕ 'ವಾನಂ' ಎಂದರೆ ಬಂದು ಹೋಗುವುದು ನಿಂತುಹೋಗುವುದೋ ಅದು ನಿರ್ವಾಣ" ಎಂದು ವ್ಯಾಖ್ಯಾನಕಾರರಾದ ನೀಲಕಂಠರು ವಿವರಿಸುತ್ತಾರೆ. ಅಂದರೆ ಸ್ಥಿತಪ್ರಜ್ಞನು ಮುಕ್ತಿಯನ್ನು ಪಡೆಯುತ್ತಾನೆ – ಅವನಿಗೆ ಪುನರ್ಜನ್ಮವಿರುವುದಿಲ್ಲ, ಅವನು ಇನ್ನುಮುಂದೆ ಸಂಸಾರ ಚಕ್ರದಲ್ಲಿ ಸುತ್ತಬೇಕಾಗಿಲ್ಲ. ✦

**'ವಿವೇಕಪ್ರಭ' ಪತ್ರಿಕೆಯು ಇಲ್ಲಿಯವರೆಗೆ ಪ್ರಕಟಿಸಿರುವ ಎಲ್ಲ ಲೇಖನಗಳನ್ನೂ, ನೀವು ಇಂಟರ್‌ನೆಟ್‌ನ ಮೂಲಕ ಓದಬಹುದು. ಹಾಗೆಯೇ ನೀವು ಬಯಸಿದ ಲೇಖನಗಳನ್ನು ಮುದ್ರಿಸಿಕೊಳ್ಳಲೂಬಹುದು. ಹಾಗೆಯೇ ಲೇಖಕರ ಮತ್ತು ಲೇಖನಗಳ ಅಕಾರಾದಿಯ ಪ್ರಕಾರ ನಿಮಗೆ ಬೇಕಾದ ಲೇಖನವನ್ನು ಹುಡುಕಿಕೊಳ್ಳಬಹುದು. ಅದಕ್ಕಾಗಿ ದಯವಿಟ್ಟು ಈ ವೆಬ್‌ಸೈಟ್ ಅನ್ನು ಭೇಟಿಕೊಡಿ:** vivekaprabha.net



# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದ

ಕೆ.ಆರ್. ಮೋಹನ್

### ಛಾಯಾಚಿತ್ರ–೧೩

ಈ ಚಿತ್ರ ತೆಗೆದ ಜಾಗ ಮತ್ತು ದಿನಾಂಕಗಳು ನಿಶ್ಚಿತವಾಗಿ ತಿಳಿದುಬಂದಿಲ್ಲ. ಸೋದರಿ ಗಾರ್ಗಿ (ಮೇರಿ ಲೂಯಿಸ್ ಬರ್ಕ್) ಅವರು ಸ್ವಾಮಿ ವಿವೇಕಾನಂದರ ಬಗ್ಗೆ ವಿಶೇಷವಾದ ಅಧ್ಯಯನ ಮಾಡಿದ್ದಾರೆ. ಅವರ ಪ್ರಕಾರ ಈ ಚಿತ್ರವನ್ನು



ಚಿತ್ರ : ೧೩

ತೆಗೆದಿದ್ದು, ಸರ್ವಧರ್ಮ ಸಮ್ಮೇಳನಕ್ಕೆ ಮುಂಚೆ, ಲಿಯಾನ್ ಎಂಬುವವರ ಮನೆಯಲ್ಲಿ. ಶಿಕಾಗೊವಿನ ಶ್ರೀಮತಿ ಮತ್ತು ಶ್ರೀ ಜಾನ್ ಬಿ. ಲಿಯಾನ್ ಉದಾರಬುದ್ಧಿಯ ಶ್ರೀಮಂತರು. ವಿಶಾಲ ಮನೋಭಾವದ ಒಬ್ಬ ಪ್ರತಿನಿಧಿಯನ್ನು ತಮ್ಮಲ್ಲಿಗೆ ಅತಿಥಿಗಳಾಗಿ ಇರಿಸಿಕೊಳ್ಳಲು ಕಳುಹಿಸಿಕೊಡುವಂತೆ ಅವರು ಸರ್ವಧರ್ಮ ಸಮ್ಮೇಳನದ ಅಧಿಕಾರಿಗಳನ್ನು ಕೇಳಿಕೊಂಡಿದ್ದರು.

ಮಧ್ಯರಾತ್ರಿಯ ನಂತರ ಕರೆಗಂಟೆ ಬಾರಿಸಿತು. ಶ್ರೀಮತಿ ಎಮಿಲಿ ಲಿಯಾನ್ ಕಾತರದಿಂದ ಬಾಗಿಲು ತೆರೆದು ನೋಡುತ್ತಾರೆ, ಕಿತ್ತಳೆ ಬಣ್ಣದ ನಿಲುವಂಗಿ ಮತ್ತು ಕೆಂಪು ಪೇಟಗಳನ್ನು ಧರಿಸಿದ ಮಂದಹಾಸವದನನಾದ ಸುಂದರ ಪೌರ್ವಾತ್ಯ ಯುವಕನೊಬ್ಬ ನಿಂತಿದ್ದಾನೆ! ಆಗಿನ್ನೂ ಸ್ವಾಮೀಜಿ ಸಮ್ಮೇಳನದಲ್ಲಿ ಭಾಷಣ ಮಾಡಿರಲಿಲ್ಲ ಮತ್ತು ಶಿಕಾಗೊದ ಮಹಾಜನತೆಗೆ ಪರಿಚಿತರಾಗಿರಲಿಲ್ಲ. ಆದರೂ ಅವರನ್ನು ಕಂಡ ತಕ್ಷಣವೇ ಲಿಯಾನ್ ದಂಪತಿಗಳು ಅವರೆಡೆಗೆ ಆಕರ್ಷಿತರಾದರು. ಅವರನ್ನು ಆದರದಿಂದ ಸ್ವಾಗತಿಸಿ ಉಪಚರಿಸಿದರು. ಮುಂದೆ ಇದು ಸುದೀರ್ಘ ಸುಮಧುರ ಬಾಂಧವ್ಯಕ್ಕೆ ನಾಂದಿಯಾಯಿತು. ವೃದ್ಧ ಲಿಯಾನ್ ದಂಪತಿಗಳು ಸ್ವಾಮೀಜಿಯವರನ್ನು ಸ್ವಂತ ಮಗನಂತೆ ಕಾಣುತ್ತಿದ್ದರು. ಈ ಚಿತ್ರದಲ್ಲಿ ಸ್ವಾಮೀಜಿಯವರ ಹಸ್ತಾಕ್ಷರವಿರುವುದನ್ನು ಗಮನಿಸಬಹುದು.

### ಛಾಯಾಚಿತ್ರ–೧೪

ಇದು ೧೮೯೩ರಲ್ಲಿ ಶಿಕಾಗೋನಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ತೆಗೆದ ಚಿತ್ರ. ಭಾರತದೇಶದಿಂದ ಹೋದ ಐದು ಜನರು ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗ ವಹಿಸಿದ್ದರು. ಅವರ ಪರಿಚಯ ಈ ರೀತಿಯಿದೆ: ಎಡ ದಿಂದ ಮೊದಲನೆಯವರು ಮದ್ರಾಸಿನ ನರಸಿಂಹಾಚಾರಿ, ಎರಡನೆಯವರು ಲಾಹೋರಿನ ಬ್ಯಾರಿಸ್ಟರ್ ಲಕ್ಷ್ಮೀನಾರಾ ಯಣ್, ಮೂರನೆಯವರು ಸ್ವಾಮೀಜಿ, ನಾಲ್ಕನೆಯವರು ಸಿಂಹಳದ ಧರ್ಮಪಾಲರೆಂಬ ಬೌದ್ಧ ಪ್ರತಿನಿಧಿ, ಐದನೆಯವರು ಮುಂಬೈನ ನ್ಯಾಯವಾದಿ ಹಾಗೂ ಜೈನಧರ್ಮದ ವಕ್ತಾರ ರಾದ ವೀರಚಂದ್ ಗಾಂಧಿ.

ಜೆ. ಡಬ್ಲ್ಯು. ಹ್ಯಾನ್‌ಸನ್ ಎಂಬುವವರು ಪರಿಷ್ಕರಿಸಿ ಪ್ರಕಟಿಸಿದ The World's Congress of Religions ಎಂಬ ಪುಸ್ತಕದಲ್ಲಿ ಈ ಚಿತ್ರವು ಮೊದಲು ಪ್ರಕಟವಾಯಿತು. ಈ ಚಿತ್ರವನ್ನು ತೆಗೆದ ದಿನಾಂಕ ೧೮೯೩, ಸೆಪ್ಟೆಂಬರ್ ೧೧.

ಚಿತ್ರ : ೧೪



## ಛಾಯಾಚಿತ್ರ–೧೫

ಈ ಚಿತ್ರ ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಸ್ವಾಮೀಜಿ ಭಾಗವಹಿಸಿದ ಸಂದರ್ಭದಲ್ಲಿ ತೆಗೆದದ್ದು. Neely's History of the Parliament of Religions ಎಂಬ ಪುಸ್ತಕದಲ್ಲಿ ಈ ಚಿತ್ರ ಮೊದಲು ಪ್ರಕಟವಾಯಿತು. ಸ್ವಾಮೀಜಿ ಬಲಗೈಯಲ್ಲಿ ಒಂದು ಕಾಗದದ ಸುರುಳಿಯನ್ನು ಹಿಡಿದುಕೊಂಡಿದ್ದಾರೆ. ಪ್ರತಿನಿಧಿಗಳ ಬಿಳಿ ಗುರುತಿನ ಚೀಟಿಯನ್ನು ತಮ್ಮ ನಿಲುವಂಗಿಯ ಮೇಲ್ಭಾಗದಲ್ಲಿ ಧರಿಸಿದ್ದಾರೆ. ಈ ಚಿತ್ರವನ್ನು ತೆಗೆದದ್ದು ಚಿತ್ರ ೧೮೯೩ರ ಸೆಪ್ಟಂಬರ್ ೧೧ ನೇ ತಾರೀಖಿನಂದು.

ಸಮ್ಮೇಳನದ ಉದ್ಘಾಟನೆಯ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಆ್ಯನಿ ಬೆಸೆಂಟರು ಸ್ವಾಮೀಜಿ ಬಗ್ಗೆ ಹೀಗೆ ಬಣ್ಣಿಸುತ್ತಾರೆ:

**"ಶಿಕಾಗೋ ನಗರದ ದಟ್ಟ ವಾತಾವರಣದ ಮಧ್ಯದಲ್ಲಿ, ಪ್ರಖರ ಪೀತಾರುಣವಸ್ತ್ರಧಾರಿಯಾಗಿ ಭಾರತೀಯ ಸೂರ್ಯನಂತೆ ಕಂಗೊಳಿಸುತ್ತಿದ್ದ ಆ ತೇಜೋಮಯಮೂರ್ತಿಯದು ಸಿಂಹಸದೃಶ ಶಿರ. ಪ್ರಥಮನೋಟದಲ್ಲಿಯೇ ಅವರು ನನಗೆ ಸಂನ್ಯಾಸಿಗಿಂತ ಹೆಚ್ಚಾಗಿ ವೀರಯೋಧನಂತಯೇ ಕಂಡರು."**

ಚಿತ್ರ : ೧೫



## ಛಾಯಾಚಿತ್ರ–೧೬

ಇದು ವಿಶ್ವಧರ್ಮ ಸಮ್ಮೇಳನದ ಉದ್ಘಾಟನೆಯ ದಿನ ಅಂದರೆ ೧೮೯೩ ಸೆಪ್ಟೆಂಬರ್ ೧೧ರ ಮಧ್ಯಾಹ್ನ ತೆಗೆದ ಚಿತ್ರ. ವೇದಿಕೆಯ ಮೇಲೆ ಕುಳಿತಿದ್ದ ಸ್ವಾಮೀಜಿ ಸಭೆಯ ಕಲಾಪಗಳನ್ನು

ಚಿತ್ರ : ೧೬



ಮೌನವಾಗಿ ವೀಕ್ಷಿಸುತ್ತಿದ್ದರು. ಕಿಕ್ಕಿರಿದು ತುಂಬಿದ್ದ ಸುಮಾರು ೪೦೦೦ ಸಭಿಕರ ಮುಂದೆ ನಿಂತು ಸುಸಂಬದ್ಧವಾಗಿ ವಿಚಾರ ಮಂಡಿಸಲು ಅಪಾರ ಆತ್ಮವಿಶ್ವಾಸ ಬೇಕಾಗುತ್ತದೆ. ಈ ಹಿಂದೆ ಸ್ವಾಮೀಜಿ ಇಂತಹ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುವುದಿರಲಿ, ಕಣ್ಣಿನಿಂದ ನೋಡಿಯೂ ಇರಲಿಲ್ಲ. ಇಂತಹ ಸಭಿಕರನ್ನು ಉದ್ದೇಶಿಸಿ ತಾವೇನು ಮಾತನಾಡಲು ಸಾಧ್ಯ ಎಂದು ಅವರ ಎದೆ ಅಳುಕಿತು. ಪ್ರತಿನಿಧಿಗಳೆಲ್ಲರೂ ತಮ್ಮ ಭಾಷಣಗಳನ್ನು ಬರೆದುಕೊಂಡು ಸಿದ್ಧರಾಗಿ ಬಂದಿದ್ದರು. ಆದರೆ ಸ್ವಾಮೀಜಿ ತಮ್ಮ ಭಾಷಣವನ್ನು ಸಿದ್ಧಪಡಿಸಿಕೊಂಡಿರಲೂ ಇಲ್ಲ, ಏನು ಮಾತನಾಡಬೇಕೆಂದು ಆಲೋಚಿಸಿರಲೂ ಇಲ್ಲ. ತಮ್ಮ ಮೂರ್ಖತನಕ್ಕಾಗಿ ಸ್ವಾಮೀಜಿ ತಮ್ಮನ್ನು ತಾವೇ ಹಳಿದು ಕೊಂಡರು.

ಸ್ವಾಮೀಜಿಯವರನ್ನು ಮಾತನಾಡಲು ಕರೆದಾಗ, "ನನ್ನ ಸರದಿ ಆಮೇಲೆ ಬರಲಿ" ಎಂದು ಮೂರ್‍ನಾಲ್ಕು ಸಲ ಹೇಳಿ ದರು. ಆಗ ಇವರೇನು ಉಪನ್ಯಾಸ ಮಾಡುವರೋ ಇಲ್ಲವೋ ಹೇಗೆ ಎಂದು ಅಧ್ಯಕ್ಷರು ಅಚ್ಚರಿಗೊಂಡರು. ಆಗ ಪಕ್ಕದಲ್ಲಿ ಕುಳಿತಿದ್ದ ಪಾಲ್ ಬೆನೆಟ್ ಮೌರಿ (Paul Bennet Maury) ಎಂಬ ಫ್ರೆಂಚ್ ಪಾದ್ರಿ ಸ್ವಾಮೀಜಿಯವರನ್ನು ಪ್ರೋತ್ಸಾಹಿಸಿ ಧೈರ್ಯ ತುಂಬಿದರು.

ಒಡನೆಯೇ ಸ್ವಾಮೀಜಿ ಎದ್ದುನಿಂತು, ದೇವಿ ಸರಸ್ವತಿಯನ್ನು ಸ್ಮರಿಸಿ ತಮ್ಮ ಮೇಘಸದೃಶ ವಾಣಿಯಲ್ಲಿ **"ಅಮೆರಿಕದ ಸೋದರ ಸೋದರಿಯರೇ"** ಎಂದು ಸಭಿಕರನ್ನು ಸಂಬೋಧಿಸಿದರು. ಅನಂತರ ನಡೆದ ಅದ್ಭುತ ಸಂಗತಿ ಯಾರಿಗೆ ತಾನೆ ಗೊತ್ತಿಲ್ಲ!

ಚಿತ್ರದಲ್ಲಿ ಕುಳಿತಿರುವ ಪ್ರತಿನಿಧಿಗಳು (ಎಡದಿಂದ) ವೀರ ಚಂದ ಗಾಂಧಿ, ಧರ್ಮಪಾಲ, ಸ್ವಾಮೀಜಿ ಮತ್ತು ಪಾಲ್ ಬೆನೆಟ್ ಮೌರಿ.